ಕಲ್ಲುಸಕ್ಕರೆ

# ಸಾಲಿ ಅಜ್ಜನ ಡೈರಿ



ಸಂಪಾದಕ

**ಸಿದ್ಧಲಿಂಗ ಪಟ್ಟಣಶೆಟ್ಟಿ**

ಸಾಲಿ ರಾಮಚಂದ್ರರಾಯರು (ಆ. 10, 1888 – ಅ. 31, 1978) ಕನ್ನಡಿಗರ ಭಾವಕೋಶವನ್ನು ಸಮೃದ್ಧಗೊಳಿಸಿದ ನವೋದಯದ ಮುಖ್ಯ ಕವಿಗಳಲ್ಲೊಬ್ಬರು. 'ಕನ್ನಡದ ನೆಲದ ಪುಲ್ಲೆನಗೆ ಪಾವನ ತುಲಸಿ' ಎಂದವರು. ಕನ್ನಡದೊಂದಿಗೆ ಸಂಸ್ಕೃತದಲ್ಲೂ ಹಿಡಿತ ಹೊಂದಿದ್ದರು. ಪಾಲಿ, ಫ್ರೆಂಚ್, ಮರಾಠಿ, ಬೆಂಗಾಲಿ, ಗುಜರಾತಿ, ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳ ಪರಿಚಯ ಹೊಂದಿದ್ದರು. ಗಾಂಧಿ ಮತ್ತು ತಿಲಕರ ಅನುಯಾಯಿಯೂ ಸ್ವಾತಂತ್ರ್ಯಪ್ರೇಮಿಯೂ ಆಗಿದ್ದರು. ಅವರ ಮಗ ಸತ್ಯಾಗ್ರಹಕ್ಕೆ ತೆರಳಿದ್ದಾಗ ಸಾವಿಗೀಡಾಗಿದ್ದ. ರಾಮಾಯಣ ಮಹಾಕಾವ್ಯದ ಎರಡು ಸಂಪುಟಗಳನ್ನು ಸಾಲಿಯವರು ಪ್ರಕಟಿಸಿದ್ದರು. ಉಳಿದ ಅಪ್ರಕಟಿತ ಸಂಕಲನಗಳು ಗೆದ್ದಲುಗಳ ಪಾಲಾಗಿದ್ದವು. ಅವರ ಸಮಗ್ರಕಾವ್ಯವನ್ನು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ಸಂಪಾದಿಸಿದ್ದಾರೆ. ಇಲ್ಲಿ ಪ್ರಕಟಗೊಂಡಿರುವ ಸಾಲಿ ರಾಮಚಂದ್ರರಾಯರ ಕುರಿತ ಟಿಪ್ಪಣಿ ಹಾಗೂ ಅವರ ಡೈರಿಯೊಂದರ ಕೆಲವು ಟಿಪ್ಪಣಿಗಳು, ಕನ್ನಡದ ಅನನ್ಯ ಬರಹಗಾರರೊಬ್ಬರ ಸಾಧನೆ ಹಾಗೂ ವ್ಯಕ್ತಿತ್ವದ ಚೆಲುವನ್ನು ಪರಿಚಯಿಸುವಂತಿವೆ ಹಾಗೂ ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಜೀವನಮೌಲ್ಯ, ನಂಬಿಕೆಗಳನ್ನು ಕಾಣಿಸುವಂತಿವೆ.